ತನಕ ಓದ್ತಾ ಇರ್ತಿದ್ದ. ಹಗಲು ಹೊತ್ತು ತೋಟದಲ್ಲಿ ಆಳುಗಳ ಜತೆ ಸೇರಿಕೊಂಡು ಕೆಲಸ ಮಾಡೋಕೆ ಶುರು ಮಾಡಿದ್ದ. ಹಿಂದೆ ಯಾವಾಗಲೂ ಅವನು ತೋಟದಲ್ಲಿ ಕೆಲಸ ಮಾಡ್ತ ಇರಲಿಲ್ಲ...

ಮಧ್ಯಾಹ್ನದ ಹೊತ್ತು ಬಿಸಿಲು ಜಾಸ್ತಿ ಇದ್ದಾಗ, ಬಿಸಿಲಲ್ಲಿ ಎಷ್ಟು ಅಂತ ದುಡೀತೀರಿ, ಸ್ವಲ್ಪ ಹೊತ್ತು ನೆರಳಲ್ಲಿ ಕೂತು ಸುಧಾರಿಸಿಕೊಳ್ಳಿ ಅಂತ ಕೆಲಸದವರನ್ನೆಲ್ಲ ಕರೆದು ಕೂರಿಸಿಕೊಂಡು ಅವರ ಕಷ್ಟ ಸುಖ ವಿಚಾರಿಸ್ತಾನೆ ಅಂತ ತೋಟದ ಮೇಸ್ತ್ರಿ ಅವನಪ್ಪನ ಗಮನಕ್ಕೆ ತಂದರು. ಆ ಮೇಲೆ ನನ್ನ ಗಂಡ, ನೀನು ತೋಟಕ್ಕೆ ಹೋಗೋದು ಬೇಡ ಅಂತ ಮಗನಿಗೆ ಹೇಳಿಬಿಟ್ಟರು.

ಅವತ್ತು ಅಪ್ಪ ಮಗನ ನಡುವೆ ದೊಡ್ಡದಾಗೇ ಮಾತಾಯ್ತು. ನಮಗ್ಯಾಕೆ ಇಷ್ಟೊಂದು ಭೂಮಿ ಇದೆ. ಕೆಲಸದವರಿಗೆ ಒಂದು ಸೆಂಟ್‌ನಷ್ಟೂ ಇಲ್ಲ. ನಮ್ಮ ತೋಟದಲ್ಲೇ ದುಡಿದು ಅವರೆಲ್ಲ ಮುದುಕರಾಗಿದ್ದಾರೆ. ಅವರಿಗೆ ಒಂದೊಂದು ಎಕರೆ ಭೂಮಿ ಕೊಡೋಣ. ಅದರಿಂದ ನಮಗೆ ಒಂದ್ಹತ್ ಎಕರೆ ಕಡಿಮೆ ಆಗಬಹುದಷ್ಟೇ ಅಂತ ಅಪ್ಪನ ಎದುರು ವಾದಿಸಿದ್ದ.

ಅಜಯ್ ಅವರಪ್ಪನ ಎದುರು ನಿಂತು ಮಾತಾಡಿದ್ದು ನಂಗೂ ಇಷ್ಟ ಆಗಲಿಲ್ಲ. ಆಳುಗಳಿಗೆ ಭೂಮಿ ಕೊಡೋ ಮಾತು ಕೇಳಿ ಮೊದಮೊದಲು ನಂಗೂ ಅವನು ತಲೆಹರಟೆ ಮಾತಾಡ್ತಿದ್ದಾನೆ ಅನ್ನಿಸ್ತು. ಆದರೆ ಅವರು, ಈ ಭೂಮಿ ನಂದು. ನಾನು ಬದುಕಿರೋವರೆಗೆ ಒಂದು ಸೆಂಟಿನಷ್ಟೂ ಭೂಮಿ ಯಾರಿಗೂ ಕೊಡಲ್ಲ. ಸಾಯೋ ಮೊದಲು ನಮ್ಮ ಮಠದ ಹೆಸರಿಗೆ ಬರೆದು ಸಾಯ್ತೀನಿ... ನೀನು ಎಲ್ಲಾದ್ರೂ ಹೋಗಿ ದುಡಿದು ಭೂಮಿ ಖರೀದಿ ಮಾಡಿ ಅದನ್ನು ಯಾರಿಗೆ ಬೇಕಾದರೂ ಹಂಚು... ನಾನು ಕೊಡಲ್ಲ. ಇನ್ಮುಂದೆ ಈ ವಿಷಯದ ಬಗ್ಗೆ ನನ್ನತ್ರ ಮಾತು ಬೇಡ. ನೀನು ತೋಟದ ಕೆಲಸ ಮಾಡೋದೂ ಬೇಡ. ನಿಂಗೆ ಅನ್ನ ಹಾಕ್ತೀನಿ, ತಿಂದುಕೊಂಡು ಮನೇಲಿ ಬಿದ್ದಿರು. ಭೂಮಿ ತಂಟೆಗೆ ಬಂದರೆ ನಾನು ಸುಮ್ಮನಿರಲ್ಲ ಅಂತ ಕಡ್ಡಿ ಮುರಿದ ಹಾಗೆ ಹೇಳಿಬಿಟ್ಟರು.

ಆಮೇಲೆ ಮಗ ಇನ್ನಷ್ಟು ಸೀರಿಯಸ್ ಆದ. ಉಪ್ಪರಿಗೆಯಿಂದ ಇಳಿದು ಕೆಳಕ್ಕೆ ಬರ್ತಲೇ ಇರಲಿಲ್ಲ. ಸ್ನಾನಕ್ಕೆ, ಶೌಚಕ್ಕೆ, ಮಾತ್ರ ಕೆಳಗೆ ಬರ್ತಾ ಇದ್ದ. ಊಟ, ತಿಂಡಿ ಎಲ್ಲವನ್ನೂ ಉಪ್ಪರಿಗೆಗೆ ಕಳಿಸಿಕೊಡ್ತಾ ಇದ್ದೆ. ಕೆಲವು ದಿನ ನಾವು ಅವನನ್ನು ಏನೂ ಕೇಳಲಿಲ್ಲ. ನಾಲ್ಕು ದಿನ ಕಳೆದರೆ ಸರಿ ಹೋಗ್ತಾನೆ ಅಂದ್‌ಕೊಂಡಿದ್ವಿ. ಆಮೇಲೆ ಒಂದ್ ದಿನ ಇದ್ದಕ್ಕಿದ್ದಂತೆ ಮನೆ ಬಿಟ್ಟು ಹೋದ. ಉಟ್ಟಬಟ್ಟೆಯಲ್ಲೇ ಹೋಗಿದ್ದಾನೆ. ಅವನು ಹೋದ ಮೇಲೆ ಅವನ ಸೂಟ್ಕೇಸ್, ಕಬರ್ಡ್‌ಗಳನ್ನೆಲ್ಲ ತಡಕಾಡಿದೆ. ಒಂದು ಸೂಟ್ಕೇಸ್ ತುಂಬಾ ತೆಲುಗು, ಇಂಗ್ಲಿಷ್ ಕವಿತೆಯ ಪುಸ್ತಕಗಳು ಸಿಕ್ಕಿದವು! ಕೆಲವು ತೆಲುಗು ಪತ್ರಿಕೆಗಳಲ್ಲಿ ಪ್ರಕಟವಾದ ಬಿಡಿ ಪದ್ಯಗಳು. ರೈತರು, ಭೂಮಿ ಇಲ್ಲದ ಕಾರ್ಮಿಕರ ಹೋರಾಟಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾದ ಆರ್ಟಿಕಲ್‌ಗಳ ಕಟಿಂಗ್ಸ್ ಸಿಕ್ಕಿದವು. ಮಗ ಹೀಗೆ ಬದಲಾಗ್ತಾನೆ ಅಂತ ನಾನು ಗೆಸ್ ಸಹ ಮಾಡಿರಲಿಲ್ಲ. ನಂಗೆ ಹೆದರಿಕೆ ಶುರುವಾಯ್ತು. ಈಗಿನ ಕಾಲದಲ್ಲಿ ಹೀಗೆ ಯೋಚನೆ ಮಾಡೋ ಹುಡುಗರು ಎಲ್ಲಿದ್ದಾರೆ ಸರ್. ಕೊಡಗಿನಲ್ಲಿ ಅವನಿಗಾಗಿ ಹುಡುಕಿಸಿದೆ. ಒಂದು ಸಲ ನಮ್ಮ ಎಸ್ಟೇಟಿನ ಮ್ಯಾನೇಜರ್ ಮದನಪಲ್ಲಿಗೂ ಹೋಗಿ ಬಂದರು. ಆದರೆ ನನ್ನ ಗಂಡ ಮಾತ್ರ ಮಗನ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಎಲ್ಲಿ ಹೋಗ್ತಾನೆ, ಬರ್ತಾನೆ ಬಿಡು ಅಂತ ಉಡಾಫೆ ಮಾತಾಡಿದರೇ ವಿನಾ ಹುಡುಕಿಸೊ ಪ್ರಯತ್ನ ಮಾಡಲಿಲ್ಲ. ಎಲ್ಲ ಕಡೆಗೂ ನಾನೇ ಓಡಾಡಿದೆ. ಅದೂ ಅವರಿಗೆ ಇಷ್ಟವಾಗಲಿಲ್ಲ...

ಎರಡು ತಿಂಗಳ ಹಿಂದೆ ನಮ್ ತೋಟದ ಮೇಸ್ತ್ರಿಯೊಬ್ಬರು ಅವರ ಪರಿಚಯದವರ ಜತೆಯಲ್ಲಿ ಶ್ರೀಶೈಲಕ್ಕೆ ಹೋಗಿದ್ದರು. ಕರ್ನೂಲ್‌ನಲ್ಲಿ ಅಜಯ್‌ನನ್ನ ನೋಡಿದೆ ಅಂತ ಅಲ್ಲಿಂದ ಬಂದ ಮೇಲೆ ಹೇಳಿದರು. ಅವನನ್ನೇ ನೋಡಿದರೋ ಅಥವಾ ಬೇರೆ ಯಾರನ್ನೋ ನೋಡಿ ಅಜಯ್ ಅಂತ ಭಾವಿಸಿದರೋ ಅಂತ ಅನುಮಾನ ಬಂದು ಮತ್ತೆ ಮತ್ತೆ ವಿಚಾರಿಸಿದೆ. ಅವರು ನೋಡಿದ್ದು ನಮ್ಮ